†ಶ್ರೀ ಬಿ. ಎಲ್. ಗೌಡ.—ನಾವು ಕೇವಲ ಮೂರು ಜನರನ್ನು ಮಾತ್ರ ನಾಮಕರಣ ಮಾಡುವುದು.

ಶ್ರೀ ಎಸ್. ಎಸ್. ಅತಕೇರಿ.—ಷೆಡ್ಯೂರ್ಡ್ ಕ್ಯಾಸ್ಟ್‌ನವರನ್ನು ಆ ಮಂಡಲಿಯಲ್ಲಿ ನಾಮಕರಣ ಮಾಡಿ ಅವರಿಗೂ ಪ್ರಾತಿನಿಧ್ಯವನ್ನು ಕೊಡುವಿರಾ ?

ಶ್ರೀ ಬಿ. ಎಲ್. ಗೌಡ.—ಜಾತಿಯ ಪ್ರಕಾರ ನಾಮಕರಣ ಮಾಡಬೇಕೆಂದಿಲ್ಲ. ಮಾಹಿತಿ ಇರುವವರನ್ನು ಅಲ್ಲಿಗೆ ನಾಮಕರಣ ಮಾಡಬೇಕಾಗುತ್ತದೆ. ಷೆಡ್ಯೂರ್ಡ್ ಕ್ಯಾಸ್ಟ್‌ನಲ್ಲಿ ಮಾಹಿತಿ ಇದ್ದವರು ಇಲ್ಲದ್ದರಿಂದ ಅವರನ್ನು ನಾಮಿನೇಟ್ ಮಾಡಿಲ್ಲ. ಮುಂದೆ ನಾಮಿನೇಟ್ ಮಾಡುವಾಗ ಅಂಥವರಿದ್ದರೆ ಅವರಿಗೆ ಅವಕಾಶ ಕೊಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಷೆಡ್ಯೂರ್ ಕ್ಯಾಸ್ಟ್‌ನವರಿಗೆ ನಾಮಿನೇಟ್ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳಿದರು. ಬೋರ್ಡ್‌ಗಳು, ಕಾರ್ಪೊರೇಷನ್‌ಗಳು ರಚನೆಯಾದಾಗ ಸರ್ಕಾರದವರು ಒಬ್ಬ ಷೆಡ್ಯೂರ್ ಕ್ಯಾಸ್ಟ್‌ನವರಿಗಾದರೂ ಪ್ರಾತಿನಿಧ್ಯ ಕೊಡಬೇಕೆಂದಿದೆ. ಷೆಡ್ಯೂರ್ ಕ್ಯಾಸ್ಟ್‌ನವರಿಗೆ ಇಲ್ಲಿ ಪ್ರಾತಿನಿಧ್ಯವಿಲ್ಲದೆ ಇರುವುದರಿಂದ ವಿಶೇಷ ರಿಯಾಯಿತಿ ತೋರಿಸಿ ಸಹಕಾರ ಸಂಘ, ಸಹಕಾರ ಬ್ಯಾಂಕುಗಳಲ್ಲಿ ಪ್ರಾತಿನಿಧ್ಯ ಕೊಡುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಮೊದಲನೆಯದಾಗಿ ಈ ಎರಡೂ ಸಹಕಾರಿ ಮಿಲ್ಲುಗಳಲ್ಲಿ ಸರ್ಕಾರದವರು ನಾಮಕರಣ ಮಾಡುವುದು ಮೂರು ಜನರನ್ನು ಮಾತ್ರ. ಷೆಡ್ಯೂರ್ ಕ್ಯಾಸ್ಟ್‌ನವರು ಮಾಹಿತಿ ಇದ್ದವರು ಯಾರೂ ಇಲ್ಲದ್ದರಿಂದ ಅವರನ್ನು ನಾಮಕರಣ ಮಾಡಿಲ್ಲ. ಮುಂದೆ ಮಾಹಿತಿ ಇದ್ದವರಿದ್ದರೆ ಅವರನ್ನು ನಾಮಕರಣ ಮಾಡುತ್ತೇವೆ.

Sri D. B. KALMANKAR.—May I know whether those who are not Members of the Society also could be nominated Sir ?

Sri B. L. GOWDA.—Usually not.

ಶ್ರೀ ಎಂ. ನಾಗಪ್ಪ.—ಸರ್ಕಾರದವರು ನಾಮಕರಣ ಸದಸ್ಯರನ್ನು ಅವರ ಇಚ್ಛಾನುಸಾರವಾಗಿ ನೇಮಿಸುತ್ತಾರೆ ಎಂದು ಹೇಳಿದ್ದಾರೆ. ರಾಜ್ಯಾಂಗದ ಪ್ರಕಾರ ಷೆಡ್ಯೂರ್ ಕ್ಯಾಸ್ಟ್ ಮತ್ತು ಷೆಡ್ಯೂರ್ ಟ್ರೈಬಿನವರಿಗೆ ವಾಸ್ತವಿಕವಾಗಿ ಸರ್ಕಾರ ಸ್ಥಳಗಳನ್ನು ಕೊಡಬೇಕೆಂದಿದೆ. ಸರ್ಕಾರದವರು ನಾಮಕರಣ ಮಾಡುವ ಕಾಲಕ್ಕೆ ಸದಿಚ್ಛೆಯಿಂದ ಇನ್ನು ಮೇರಾದರೂ ಹರಿಜನ ಮತ್ತು ಗಿರಿಜನರಿಗೆ ನಾಮಕರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಬಹುಶಃ ಹಿಂದುಳಿದ ವರ್ಗದವರಿಗೆ ಏನು ರಕ್ಷಣೆ ಕೊಡಬೇಕು ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಈ ಸಂದರ್ಭದಲ್ಲಿ ಸರಿಯಾದವರು ಇರಲಿಲ್ಲ. ಮುಂದೆ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಅದಕ್ಕೋಸ್ಕರವೇ ಈ ಪ್ರಶ್ನೆ ಮಂತ್ರಿಮಂಡಲದ ಮುಂದೆ ಬಂದು ಅವರಿಗೆ ಎಲ್ಲ ರಕ್ಷಣೆಯನ್ನೂ ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ —ಈ ಗಿರಣಿಗಳಲ್ಲಿ ನಾಮಕರಣ ಮಾಡುವಾಗ ಡೈರೆಕ್ಟರಾಗಲು ಏನಾದರೂ ಕನಿಷ್ಠ ಇಷ್ಟು ಷೇರುಗಳನ್ನು ಹೊಂದಿರಬೇಕು ಎನ್ನುವ ನಿಯಮವಿದೆಯೇ ?

ಶ್ರೀ ಬಿ. ಎಲ್. ಗೌಡ.—ಡೈರೆಕ್ಟರಾಗುವುದಕ್ಕೆ ಮುಂಚೆ ಅವರು ಷೇರುಗಳನ್ನು ಹೊಂದಿರಬೇಕು. ಇಷ್ಟೇ ಷೇರುಗಳಿರಬೇಕು ಎನ್ನುವ ನಿರ್ಬಂಧವಿಲ್ಲ.

Water Supply to Moolky and Mudabidri Town Panchayats

107. Sri RATNAKUMAR KATTEMAR (Mudabidri).—

Will the Minister for Development be pleased to state :—

(*a*) whether the Government has taken steps to provide water supply to Moolky and Moodabidri Town Panchayats ;

† Indicates that the remarks or speeches have not been revised by the member concerned.

(*b*) if so, when the work for providing water supply would be completed ?

A.—Sri B. L. GOWDA (Deputy Minister for Development).—

(*a*) Water supply of Moodabidri has already been sanctioned and the water supply to Moolky is under consideration.

(*b*) The work on Moodabidri Water Supply Scheme is in progress and it may take about two years for its completion.

ಶ್ರೀ ರತ್ನಕುಮಾರ್ ಕಜ್ಜೀಮಾರ್.—ಮೂಡಬಿದ್ರೆಗೆ ನೀರೊದಗಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಲಾಗಿದೆ. ನನಗೆ ತಿಳಿದಮಟ್ಟಿಗೆ ಜಲ್ಲಿ ಸೇಕಡ ಒಂದಂಶ ಕೆಲಸ ಕೂಡ ಆಗಿಲ್ಲ. ಆ ಬಗ್ಗೆ ತನಿಖೆ ನಡೆಸಿ ವರದಿಯನ್ನು ತರಿಸಲಾಗುವುದೇ ?

†ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ನೀರು ಸರಬರಾಜು ಯೋಜನೆಯ ಒಟ್ಟು ವೆಚ್ಚ 2 ಲಕ್ಷ 8 ಸಾವಿರ ರೂಪಾಯಿ. ಆದರಲ್ಲಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ ಎಂದರೆ ಮೂರನೆ ಒಂದು ಭಾಗಕ್ಕಿಂತ ಹೆಚ್ಚು ಕೆಲಸವಾಗಿದೆ. 150 ಅಡಿ ಆಳದ ಬೋರ್‌ವೆಲ್ ತೆಗೆಸಿದ್ದು ಅದು ಫೇಲ್ ಆದದ್ದರಿಂದ ಓಪನ್ ವೆಲ್ ತೆಗೆಸುತ್ತಿದ್ದೇವೆ. ರಿಸರ್ವಾಯರ್‌ಗಾಗಿ 40 ಸಾವಿರ ರೂಪಾಯಿ ಖರ್ಚುಮಾಡಿದ್ದೇವೆ. ಅತಿ ಶೀಘ್ರವಾಗಿ ಕೆಲಸ ಮುಂದುವರಿಯುತ್ತಿದೆ.

ಶ್ರೀ ರತ್ನಕುಮಾರ್ ಕಜ್ಜೀಮಾರ್.—ಮೂಲ್ಕ ಪಂಚಾಯಿತಿಗೆ ನೀರನ್ನೊದಗಿಸುವ ಕಾರ್ಯ ಎಷ್ಟು ಸಮಯ ತೆಗೆದುಕೊಳ್ಳಬಹುದು ?

ಶ್ರೀ ಬಿ. ಎಲ್. ಗೌಡ.—ಸರ್ಕಾರದ ವತಿಯಿಂದ ಆ ಕೆಲಸ ನಿಧಾನವಾಗಿಲ್ಲ. ಪಂಚಾಯಿತಿಯವರು ಕೊಡಬೇಕಾದ ಸೇಕಡ 10ರಷ್ಟು ಹಣವನ್ನು ಕೊಡುವುದರಲ್ಲಿ ನಿಧಾನವಾಗಿದೆ.

ಶ್ರೀ ಸಿದ್ದಯ್ಯ ಕಾಶಿಮಠ.—ಸಾಕಾದಷ್ಟು ಸಿಬ್ಬಂದಿ ಇಲ್ಲದೆ ಕೆಲಸ ನಿಧಾನವಾಗಿರುವುದರಿಂದ ಸಿಬ್ಬಂದಿಯನ್ನು ಹೆಚ್ಚಾಗಿ ಒದಗಿಸಿ ನೀರು ಬೇಗ ಸಿಗುವಂಥ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಈ ಕೆಲಸಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಬೇಕಾದರೆ ಎರಡು ವರ್ಷ ತೆಗೆದುಕೊಂಡಿದ್ದೀರಿ. ಇದಕ್ಕೆ ಎರಡು ವರ್ಷಗಳು ಬೇಕಾಯಿತೇ ?

ಶ್ರೀ ಬಿ. ಎಲ್. ಗೌಡ.—ಬಾವಿಯಲ್ಲಿ ನೀರು ಬಿದ್ದಿಲ್ಲ, ಅದು ನಮ್ಮ ತಪ್ಪಲ್ಲ. ಬೋರ್‌ವೆಲ್ ತೆಗೆದಿದ್ದು ಅದು ಫೇಲ್ ಆದದ್ದರಿಂದ ಓಪನ್ ವೆಲ್ ತೆಗೆಸುತ್ತಿದ್ದೇವೆ. ನೀರು ಎಷ್ಟುಮಟ್ಟಿಗೆ ಬೀಳುತ್ತದೆಂಬುದನ್ನು ನೋಡಿಕೊಂಡು ಮುಂದೆ ಕೆಲಸ ಮಾಡಬೇಕಾಗುತ್ತದೆ.

ಶ್ರೀ ರತ್ನಕುಮಾರ್ ಕಜ್ಜೀಮಾರ್.—ಸ್ವಾಮಿ, ಮುಲ್ಕಿ ಪಂಚಾಯಿತಿಯವರು ವಾಟರ್ ಸಪ್ಲೈ ಕೆಲಸಕ್ಕಾಗಿ 10 ಪರ್ಸೆಂಟು ಕೊಡುವುದಕ್ಕಾಗುವುದಿಲ್ಲ, 5 ಪರ್ಸೆಂಟು ಕೊಡುತ್ತೇವೆ ಎಂದು ತಮಗೆ ಒಂದು ಪತ್ರವನ್ನು ಬರೆದಿದ್ದಾರೆ. ಇದರ ಬಗ್ಗೆ ಏನಾದರೂ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಯೋಚನೆ ಮಾಡೋಣ.

ಶ್ರೀ ಕೆ. ಎಂ. ತಮ್ಮಯ್ಯ.—ಬಾವಿ ತೆಗೆಯಬೇಕಾದರೆ ಎಲ್ಲಿ ನೀರು ಬರುತ್ತದೋ ನೋಡಿ ತೆಗೆಸುತ್ತಾರೆ. ಆದರೂ ಎಷ್ಟು ತೆಗೆದರೂ ನೀರೇ ಬರುವುದಿಲ್ಲ ಎಂದು ಹೇಳುತ್ತೀರಿ ಪತಕ್ಕೆ ಸ್ವಾಮಿ!

ಶ್ರೀ ಬಿ. ಎಲ್. ಗೌಡ.—ವಾಟರ್ ಡಿವೈನರ್‌ನ ಅನುಭವದ ಪ್ರಕಾರ ಅವರ ಸಲಹೆ ಮೇರೆ ಬಾವಿ ತೋಡಿಸುತ್ತಾರೆ. ಆದರೆ ಕೆಲವು ಸಂದರ್ಭದಲ್ಲಿ ಅವರು ಹೇಳಿದಂತೆ ಮಾಡಿದರೂ ಫೈಲ್ಯೂರ್ ಆಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೂಡಬಿದ್ರೆ ಮತ್ತು ಇನ್ನೂ ಅನೇಕ ಗ್ರಾಮಗಳಲ್ಲಿ 2—3 ವರ್ಷಗಳಿಂದಲೂ ಕೂಡಿಯುವ ನೀರಿನ ಅಭಾವ ಇದೆ. ಇದನ್ನು ತಪ್ಪಿಸಬೇಕಾದರೆ ಒಂದು ದಿವಸಕ್ಕೆ 100—120 ಅಡಿ ತೆಗೆಯುವಂಥ ಹೆರ್ಕೋ ಜ್ಯಿಲಾನ್ ಯಂತ್ರಗಳನ್ನು ತರಿಸಿಯಾದರೂ ಈ ಕೂಡಿಯುವ ನೀರನ್ನು ಬೇಗ ಒದಗಿಸುವುದಕ್ಕೆ ಏಕೆ ಏರ್ಪಾಡು ಮಾಡಬಾರದು ?

ಶ್ರೀ ಬಿ. ಎಲ್. ಗೌಡ.—ಈ ತರಹ ಹೆಲ್ಮೋ ಟೈಲರ್ಸ್ ಬೇಕು ಎಂದು ಕೇಂದ್ರ ಸರ್ಕಾರದ ವರಿಗೆ ಈಗಾಗಲೇ ತಿಳಿಸಿದ್ದೇವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸ್ವಾಮಿ, ಗ್ರಾಮ ಪಂಚಾಯತಿಗಳಲ್ಲಿ ಕಂದಾಯ ಇಲ್ಲದೇ ಬರ ಬಂದು ದುಡ್ಡು ಇಲ್ಲದೇ ಇರುವಾಗ ಅವರು 10 ಪರ್ಸೆಂಟು ಕೊಡುವುದನ್ನು ಕಡಿಮೆ ಮಾಡಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ವಿಶೇಷ ಸಂದರ್ಭದಲ್ಲಿ ಕ್ಷಾಮ ಪರಿಸ್ಥಿತಿ ಬಂದಾಗ ಒಂದು ವೇಳೆ ಹಾಗೆ ಮಾಡಬಹುದು. ಇದರಲ್ಲಿ ಅವರಿಗೇ ಆನಕ್ಕ ಇರಬೇಕು. ಆದರೆ ಎಲ್ಲಾ ಸಂದರ್ಭದಲ್ಲೂ ಪೂಜಾ ಮಾಡುವುದಕ್ಕೆ ಸಾಧ್ಯವಿಲ್ಲ.

National Rural Water Supply Schemes

108. Sri D. B. KALMANKAR (Aland).—

Will the Minister for Development be pleased to state :—

(*a*) the number and names of villages in Aland Taluka sanctioned to be taken by under the National Rural Water Supply Scheme, during years 1966-67, 1967-68, 1968-69 ;

(*b*) the number of them completed and the number of the villages where work is in progress?

A.—Sri B. L. GOWDA (Deputy Minister for Development).—

(*a*) The following 8 works have been sanctioned during the year 1966-67:—

1 Korehalli,
2 Madyal,
3 Chinchansoor,
4 Narona,
5 Kadaganchi,
6 Madanhipperga,
7 Tadkal,
8 Kinnisultan.

No schemes have been sanctioned during the years 1967-68 and 1968-69.

(*b*) All the above works are under various stages of progress except the work at Kinnisultan.

Sri D. B. KALMANKAR.—May I know whether any schemes have been recommended by the Executive Engineer during the year 1967-68 and 1968-69?

† Sri B. L. GOWDA.—The following 9 villages have been recommended:

1. Bhusnoor
2. Khajuri
3. Yelsangi
4. Salegoon
5. Nimberga
6. Dhuthargaon
7. Hiroli
8. Gola 'B'
9. Munahalli